# ಒಂದನೇ ಅಪರ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ

## ಸಿ ಸಿ ಸಂಖ್ಯೆ 2471/2024

ಚಾಸಾ 13   ಫ್ರಾಸಾ 2

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ ಚಂದ್ರು |
| ತಂದೆಯ ಹೆಸರು | : | ಮುನಿಮಾದ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ ಸ್ಥಳ | : | ಜನತಾ ಕಾಲೋನಿ, ಮ.ಮ. ಬೆಟ್ಟ ಗ್ರಾಮ |

ದಿನಾಂಕ 09.02.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ – ಮಾನ್ಯ ಸಸಅ ರವರಿಂದ

ಚಾಸಾ-1,11 ಮತ್ತು 12 ರವರ ಪರಿಚಯ ಇರುವುದಿಲ್ಲ. ಮೃತ ಕರುಣಾಕರ ರವರ ಪರಿಚಯ ಇರುವುದಿಲ್ಲ. ಆರೋಪಿ ನನಗೆ ಪರಿಚಯ ಇರುವುದಿಲ್ಲ. ನಾನು ಆತನನ್ನು ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ. ಆರೋಪಿ ಯಾವ ರೀತಿ ವಾಹನವನ್ನು ಚಾಲನೆ ಮಾಡಿಕೊಂಡು ಬಂದು ಯಾರಿಗೆ ಡಿಕ್ಕಿ ಪಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಯಾವುದೇ ಅಪಘಾತವನ್ನು ಕಣ್ಣಾರೆ ಕಂಡಿರುವುದಿಲ್ಲ. ಪ್ರಕರಣ ಸಂಬಂಧ ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಈ ಪ್ರಕರಣದ ವಿದ್ಯಾಮಾನ ನನಗೆ ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾದ ಕಾರಣ ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಗಿದೆ)**

**ಪಾಟೀ ಸವಾಲು : ಮಾನ್ಯ ಸ.ಸ.ಅ ರವರಿಂದ**

ದಿನಾಂಕ 26.07.2024ರಂದು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ನಾನು, ಚಾಸಾ11 ಮತ್ತು 12 ರವರು ಮಲೈ ಮಹದೇಶ್ವರ ಬೆಟ್ಟದ ಶಿವದರ್ಶಿನಿ ವಸತಿ ಗೃಹದ ಮುಂದೆ ನಿಂತಿದ್ದೆವು ಎಂದರೆ ಸರಿಯಲ್ಲ. ಆಗ ಕೊಳ್ಳೇಗಾಲದ ಕಡೆಯಿಂದ ಬಂದ ಕೆಎ-11-ಎ-9444 ಉದಯರಂಗ ಬಸ್ ಅದರ ಚಾಲಕ ಅತೀ ವೇಗ ಮತ್ತು ಅಜಾಗರೂಕತೆಯಿಂದ ಬಸ್ಸನ್ನು ಚಾಲನೆ ಮಾಡಿಕೊಂಡು ಮುಂದೆ ಹೋಗುತ್ತಿದ್ದ ಟಿಎನ್-36-ಎಯು-9717 ಎಕ್ಸ್ ಎಲ್ ಸೂಪರ್ ಹೆವಿ ಡ್ಯೂಟಿ ಮೋಟಾರ್ ಸೈಕಲನ್ ನ್ನು ಚಾಲನೆ ಮಾಡಿಕೊಂಡು ಹೋಗುತ್ತಿದ್ದ ಮೃತ ಕರುಣಾಕರ್ ರವರ ವಾಹನಕ್ಕೆ ಹಿಂದಿಕ್ಕಲು ಹೋಗಿ ಡಿಕ್ಕಿ ಹೊಡೆದು ಅಪಘಾತ

ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಡಿಕ್ಕಿ ಮಾಡಿದ ಪರಿಣಾಮ ಕರುಣಾಕರ್ ರವರು ನೆಲಕ್ಕೆ ಬಿದ್ದು ಬಸ್ ನ ಹಿಂಭಾಗದ ಚಕ್ರಕ್ಕೆ ತಲೆ ಸಿಲುಕಿ ಹಾಗೂ ಹೃದಯ ಭಾಗದ ಮೇಲೆ ತೀವ್ರ ತರದ ರಕ್ತಗಾಯವಾಗಿ ಸ್ಥಳದಲ್ಲೇ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ಮತ್ತು ಆರೋಪಿ ಮೃತ ಕರುಣಾಕರ್ ನನ್ನು ಎತ್ತಿಕೊಂಡು ಹೋಗಿ ಮ.ಮ. ಬೆಟ್ಟದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು ಎಂದರೆ ಸರಿಯಲ್ಲ. ನಂತರ ಅಲ್ಲಿ ವೈದ್ಯರು ಪರೀಕ್ಷೆ ಮಾಡಿ ಕರುಣಾಕರ್ ಮೃತಪಟ್ಟಿರುವುದಾಗಿ ತಿಳಿಸಿದರು ಎಂದರೆ ಸರಿಯಲ್ಲ. ಸದರಿ ಅಪಘಾತ ಸಂಬಂಧ ಚಾಸಾ–1 ರವರಿಗೆ ನಾನು ಕರೆ ಮಾಡಿ ತಿಳಿಸಿದೆ ಎಂದರೆ ಸರಿಯಲ್ಲ. ನಂತರ ಅಪಘಾತಪಡಿಸಿದ ಆರೋಪಿಯ ಹೆಸರು ಸೈಯದ್ ಪಾಷಾ ಬಿನ್ ಸೈಯದ್ ಖಾಸಿಂ ಎಂದು ತಿಳಿಸಿದರು ಎಂದರೆ ಸರಿಯಲ್ಲ. ನಂತರ ಅಪಘಾತ ಸಂಬಂಧ ಚಾಸಾ–1 ರವರು ದೂರು ನೀಡಿರುವ ಬಗ್ಗೆ ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತಕ್ಕೆ ಆರೋಪಿಯ ಅತೀವೇಗ ಮತ್ತು ಅಜಾಗರೂಕತೆಯ ಚಾಲನೆಯೇ ಕಾರಣ ಎಂದು ದಿನಾಂಕ 27.07.2024 ರಂದು ಪೊಲೀಸರಿಗೆ ಹೇಳಿದೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಹೇಳಿಕೆಯಲ್ಲಿ "ದಿಃ26.07.2024 ----------------------------------------------------- -----------------------------------------------------ಮತ್ತೆ ನೋಡಿದರೆ ಗುರುತಿಸುತ್ತೇನೆ." ಸಾಕ್ಷಿಯು ಅಲ್ಲಗಳೆದಿರುವ ಹೇಳಿಕೆಯ ಭಾಗವನ್ನು ನಿಪಿ–4 ಎಂದು ಗುರುತಿಸಲಾಯಿತು. ನಿಪಿ–4 ರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ನನಗೆ ತಿಳಿದಿದ್ದರು ನಾನು ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಎಂ. ರಂಜಿತ್ ಕುಮಾರ್)
ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಕೊಳ್ಳೇಗಾಲ.